

ಈಕೆಗೆ ಇನ್ವೇಸಿವ್ ಡಕ್ಟಲ್ ಕಾರ್ಸಿಲೋಮ ಎಂಬ ಕ್ಯಾನ್ಸರ್‌ಕಾರಕ ಲಕ್ಷಣ ಇರುವುದು ದೃಢವಾಯಿತು. ಅಲ್ಲದೆ ಹೆಚ್ಚಿನ ಪರೀಕ್ಷೆಗಾಗಿ ನಡೆಸಿದ ಪಿಇಟಿ ಸಿಟಿ ಸ್ಕ್ಯಾನ್‌ನಲ್ಲಿ ದುಗ್ಧಗ್ರಂಥಿಗಳಲ್ಲಿ (ಆಕ್ಸಿಲಿಯರಿ ಲಿಂಫ್‌ನೋಡ್) ಕ್ಯಾನ್ಸರ್ ಇರುವುದು ಸ್ಪಷ್ಟವಾಯಿತು. ಈ ಹಿನ್ನೆಲೆಯಲ್ಲಿ ಇವರ ಸಮಸ್ಯೆಗೆ ಕಿಮೋಥೆರಪಿ, ರೇಡಿಯೇಷನ್ ಚಿಕಿತ್ಸೆ ಹಾಗೂ ಹಾರ್ಮೋನ್ ಥೆರಪಿಯನ್ನು ಮಾಡಲಾಗಿತ್ತು. ಅಲ್ಲದೆ ಸಂಪೂರ್ಣ ಸ್ತನ ಛೇದನ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದರಿಂದ ದೊಡ್ಡ ಗಂಡಾಂತರದಿಂದ ಹೇಮಲತಾ ಪಾರಾದಂತಾಗಿದೆ.

'ಕ್ಯಾನ್ಸರ್, ಅದರಲ್ಲೂ ಮುಖ್ಯವಾಗಿ ಸ್ತನ ಕ್ಯಾನ್ಸರ್ ಮಹಿಳೆಯರಿಗೆ ಆರಂಭದಲ್ಲಿ ಗಮನಕ್ಕೆ ಬರುವುದೇ ಇಲ್ಲ. ಎರಡನೆ ಹಂತಕ್ಕೆ ಮುಟ್ಟಿದ ಬಳಿಕವೇ ಸ್ತನದಲ್ಲಿ ಸಣ್ಣ ಪ್ರಮಾಣದ ನೋವು, ಆರೋಗ್ಯದಲ್ಲಿ ಏರುಪೇರು ಉಂಟಾಗಲಾರಂಭಿಸುತ್ತದೆ. ಇಂಥ ಪರಿಸ್ಥಿತಿ ಬಂದಾಗ ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸುವುದು, ಮ್ಯಾಮೊಗ್ರಫಿಯಂತಹ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದರಿಂದ ಕ್ಯಾನ್ಸರ್ ತೀವ್ರತೆಗೆ ಹೋಗುವುದನ್ನು ತಡೆಯಬಹುದು' ಎಂದು ಹೇಳುತ್ತಾರೆ ಡಾ. ನಂದಾ ರಜನೀಶ್.


'ಸಮತೋಲಿತ ಆಹಾರ ಕ್ರಮ, ನಿಗದಿತ ವ್ಯಾಯಾಮ, ಮಾನಸಿಕ ಸ್ಥಿಮಿತ ಕಾಪಾಡಿಕೊಳ್ಳುವುದು, ಉತ್ತಮ ಜೀವನಶೈಲಿ ರೂಢಿಸಿಕೊಳ್ಳುವುದರಿಂದ ಸ್ತನ ಕ್ಯಾನ್ಸರ್ ಬರದಂತೆ ತಡೆಯಬಹುದು' ಎಂದು ಸಲಹೆ ಮಾಡುತ್ತಾರೆ ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಯಲ್ಲಿ ಕ್ಯಾನ್ಸರ್ ತಜ್ಞರಾದ ಡಾ. ವಿಶ್ವನಾಥ್.

ಹೇಮಲತಾ ಪ್ರಕರಣದಲ್ಲಿ ಈಕೆ ಎಲ್ಲ ಚಿಕಿತ್ಸೆಗೆ ಸಮರ್ಪಕವಾಗಿ ಸ್ಪಂದಿಸಿದ ಕಾರಣ ಸ್ತನ ಛೇದನ ಚಿಕಿತ್ಸೆ ನಿರಾಳವಾಗಿ ನಡೆಯಿತು. ಶಸ್ತ್ರಚಿಕಿತ್ಸೆ ಸುಮಾರು ಒಂದೂವರೆ ಗಂಟೆ ಕಾಲ ನಡೆದಿದ್ದು, ರೋಗಿ ಪ್ರಾಣಾಪಾಯದಿಂದ ಪಾರಾಗುವಂತಾಯಿತು' ಎಂದು ಹೇಳುತ್ತಾರೆ ಅವರು.

'ಅಮೆರಿಕನ್ ಕ್ಯಾನ್ಸರ್ ಸೊಸೈಟಿಯ ಪ್ರಕಾರ, ಸಂಪೂರ್ಣ ಮಾರ್ಪಡಿಸಿದ ಸ್ತನ ಛೇದನವು ಆಧುನಿಕ ವ್ಯವಸ್ಥೆಯಾಗಿದ್ದು, ಇದರಿಂದ ಉಂಟಾಗುವ ಅಡ್ಡ ಪರಿಣಾಮಗಳು ಇತರ ವಿಧಗಳಿಗೆ ಹೋಲಿಸಿದರೆ ಬಹಳ ಕಡಿಮೆ. ಅಲ್ಲದೆ ಮಾರ್ಪಡಿಸಿದ ರಾಡಿಕಲ್ ಸ್ತನ ಛೇದನವು ಇಡೀ ಸ್ತನವನ್ನು ತೆಗೆದುಹಾಕುವ ವಿಧಾನವನ್ನು ಒಳಗೊಂಡಿರುತ್ತದೆ. ಆದರೆ ಈ ವಿಧಾನದಲ್ಲಿ ಎದೆಯ ಗೋಡೆಯ ಸ್ನಾಯುಗಳನ್ನು ಹಾಗೇ ಬಿಡಲಾಗುತ್ತದೆ. ಇದು ಆರೋಗ್ಯಕರ ಚರ್ಮದ ಅಂಗಾಂಶಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿದೆ' ಎಂದು ಮಾಹಿತಿ ನೀಡುತ್ತಾರೆ ಅವರು.

## ಸಂಪೂರ್ಣ ಸ್ತನ ಛೇದನ

ಸ್ತನ ಕ್ಯಾನ್ಸರ್ ಬಂದವರಿಗೆ ಕಾಯಿಲೆಯ ತೀವ್ರತೆ ಅನುಸರಿಸಿ, ವಿವಿಧ ರೀತಿಯ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಕೆಲವು ಶಸ್ತ್ರಚಿಕಿತ್ಸೆಗಳಲ್ಲಿ ಸ್ತನದಿಂದ ಗಡ್ಡೆಗಳನ್ನು ಹಾಗೂ ಕ್ಯಾನ್ಸರ್‌ಕಾರಕ ಅಂಶಗಳನ್ನು ಮಾತ್ರ ತೆಗೆದುಹಾಕಲಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಕ್ಯಾನ್ಸರ್ ಪೀಡಿತ ಇಡೀ ಸ್ತನವನ್ನು ತೆಗೆಯಬೇಕಾಗುತ್ತದೆ. ಇದಕ್ಕೆ ಸಂಪೂರ್ಣ ಸ್ತನ ಛೇದನ ಎನ್ನಲಾಗುತ್ತದೆ. ಇಂದಿನ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಪದ್ಧತಿಯಲ್ಲಿ ಸರ್ಜರಿಯನ್ನು ಸುಧಾರಿತ ರೀತಿಯಲ್ಲಿ ಮಾಡಲಾಗುತ್ತದೆ. ಇದನ್ನು ಮಾರ್ಪಡಿಸಿದ ಶಸ್ತ್ರಚಿಕಿತ್ಸೆ ಎನ್ನಲಾಗುತ್ತದೆ.



ಕ್ಯಾನ್ಸರ್ ಪ್ರಕಾರ ಹಾಗೂ ಅದರ ಹರಡುವಿಕೆಯ ಪ್ರಮಾಣವನ್ನು ಅನುಸರಿಸಿ, ಸಂಪೂರ್ಣ ಸ್ತನ ಛೇದನದ ನಿರ್ಧಾರವನ್ನು ನುರಿತ ಶಸ್ತ್ರಚಿಕಿತ್ಸಾ ವೈದ್ಯರು ಕೈಗೊಳ್ಳುತ್ತಾರೆ. ಇಲ್ಲಿ ಮಹಿಳೆಯ ವಯಸ್ಸು, ಆರೋಗ್ಯ ಸ್ಥಿತಿ, ಮಾಸಿಕ ಚಕ್ರದ ಬಗೆಗಿನ ಮಾಹಿತಿ, ಗಡ್ಡೆಯ ಗಾತ್ರ, ಮಧುಮೇಹ, ಬಿಪಿಯಂತಹ ಜೀವನಶೈಲಿ ಕಾಯಿಲೆ ಇದ್ದರೆ ಈ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುತ್ತಾರೆ. ಆ ನಂತರವೇ ಸೂಕ್ತ ಪರೀಕ್ಷೆಗಳನ್ನು ಕೈಗೊಂಡು ಸ್ತನ ಛೇದನ ಪ್ರಕ್ರಿಯೆ ಮಾಡುತ್ತಾರೆ.

ಸ್ತನ ಕ್ಯಾನ್ಸರ್‌ಗೆ ಒಳಗಾದ ಭಾಗ ಅಥವಾ ಗಡ್ಡೆಯ ಸುತ್ತಲಿನ ಅಸಹಜ ಅಂಗಾಂಶಗಳನ್ನು ತೆಗೆದುಹಾಕುವ ಪ್ರಕ್ರಿಯೆಗೆ ಲುಂಪೆಕ್ಟಮಿ ಎಂದು ಕರೆಯಲಾಗುತ್ತದೆ.

## ಸ್ತನ ಛೇದನದ ವಿಧಗಳು

- ಸಂಪೂರ್ಣ ಸ್ತನ ಛೇದನ
- ಎರಡೂ ಸ್ತನಗಳ ಛೇದನ
- ರಾಡಿಕಲ್ ಸ್ತನ ಛೇದನ
- ಮಾರ್ಪಡಿಸಿದ ಸ್ತನ ಛೇದನ
- ಸ್ಕಿನ್ ಸ್ಪೇರಿಂಗ್ ಮಾಸ್ಟೆಕ್ಟಮಿ
- ನಿಪ್ಪಲ್‌ಸ್ಪೇರಿಂಗ್ ಸ್ತನ ಛೇದನ

## ಸರ್ಜರಿ ನಂತರ ಮುಂದೇನು?

ಸ್ತನ ಶಸ್ತ್ರಚಿಕಿತ್ಸೆಯ ನಂತರ, ರೋಗಿಯ ರಕ್ತದೊತ್ತಡದ ಮಟ್ಟ, ಹೃದಯ ಬಡಿತ, ಉಸಿರಾಟ ಇತ್ಯಾದಿಗಳ ಮೇಲೆ ಹೆಚ್ಚು ನಿಗಾ ಇಡಬೇಕಾಗುತ್ತದೆ. ಸರ್ಜರಿಯ ಭಾಗದಲ್ಲಿ ಆದ ಗಾಯವನ್ನು ಕಾಳಜಿ ವಹಿಸುವುದು ಕೂಡ ಬಹಳ ಮುಖ್ಯ. ಅಲ್ಲಿ ಸೋಂಕಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಸರ್ಜರಿ ನಂತರವೂ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ, ವಿಕಿರಣ ಅಥವಾ ಹಾರ್ಮೋನ್ ಚಿಕಿತ್ಸೆಗಳನ್ನೂ ಮಾಡಿಸಿಕೊಳ್ಳಬೇಕಾಗುತ್ತದೆ. ಬಳಿಕ ಪರಿಸ್ಥಿತಿಯನ್ನು ನಿಭಾಯಿಸಲು ವೈದ್ಯಕೀಯ ಸಮಾಲೋಚನೆಗೂ ಒಳಗಾಗಬೇಕಾಗುತ್ತದೆ.

ಕರಿದ, ಮಸಾಲೆಯುಕ್ತ ಆಹಾರ ವರ್ಜ್ಯ. ಆಹಾರ ಪದ್ಧತಿಯಲ್ಲಿ ಕಟ್ಟುನಿಟ್ಟಿನ ಪಥ್ಯ ಅಗತ್ಯ. ವ್ಯಾಯಾಮ, ನಡಿಗೆ ನಿಯಮಿತವಾಗಿ ಮಾಡಲೇಬೇಕು. ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳಲು ಧ್ಯಾನ, ಯೋಗ, ಸಂಗೀತ ಆಲಿಸುವುದು, ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು.